is provided that is not sufficient to tackle the scarcity conditions. Relief work should be taken up on a war-footing. There is no drinking water and there is no fodder for animals.

My question (d) is `the steps taken by the Government to compensate farmers who have lost their crops', for which the answer given is `no steps have been taken'. Therefore, I urge upon the Government to take steps to see that farmers who have lost crops are given suitable compensation, immediately.

SRI R.L. JALAPPA :About drinking water there is no dearth of money. I will ask the D.C. and if any more money is required for drinking water supply we will release more money.

ರಾಜ್ಯದಲ್ಲಿ ಕೇಂದ್ರ ಸರ್ಕಾರ ನೀಡಿದ ಗೊಬ್ಬರದ ಸಬ್ಸಿಡಿಯ ರದ್ದತಿ.

694 - ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಗೊಬ್ಬರಕ್ಕೆ ಕೇಂದ್ರ ಸರ್ಕಾರ ನೀಡಿದ್ದ ಸಬ್ಸಿಡಿ ರದ್ದುಮಾಡಿದ್ದರಿಂದ ರಸಗೊಬ್ಬರಗಳ ಬೆಲೆ ವಿಪರೀತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ?*

ಆ) *ಈ ಬೆಲೆ ಏರಿಕೆಯಿಂದ ರೈತರು ಗೊಬ್ಬರ ಕೊಳ್ಳಲಾರದ ಪರಿಸ್ಥಿತಿ ಉದ್ಭವಿಸಿದ್ದು ಗೊಬ್ಬರದ ಬಳಕೆ ಗಣನೀಯವಾಗಿ ಇಳಿದಿದೆ ಎಂಬುದು ನಿಜವೇ?*

ಇ) *ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ವಿವಿಧ ಬಗೆಯ ಗೊಬ್ಬರಗಳ ಬೇಡಿಕೆ ಪೂರೈಕೆ ಉಪಯೋಗದ ಬಗ್ಗೆ ಮಾಹಿತಿ ನೀಡುವುದು.*

ಈ) *ಪುನಃ ಸಬ್ಸಿಡಿ ನೀಡಿ ಹೆಚ್ಚಿರುವ ಗೊಬ್ಬರದ ಬೆಲೆ ಇಳಿಸಲು ಕೈಗೊಳ್ಳಲಾಗಿರುವ ಕ್ರಮಗಳಾವುವು.*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು)

ಅ) ಕೇಂದ್ರ ಸರ್ಕಾರ ಅನಿಯಂತ್ರಿತ ರಸಗೊಬ್ಬರಗಳಿಗೆ ನೀಡುತ್ತಿರುವ ಸಬ್ಸಿಡಿಯನ್ನು ಕರ್ನಾಟಕ ರಾಜ್ಯದಲ್ಲಿ ರದ್ದುಪಡಿಸಿರುವುದಿಲ್ಲ.

ಆ) ಕೇಂದ್ರ ಸರ್ಕಾರದ ರಂಜಕ, ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ದಿ. 25-8-92ರಂದು ಅನಿಯಂತ್ರಣಗೊಳಿಸಿದ ಮೇಲೆ ಈ ರಸಗೊಬ್ಬರಗಳ ಬೆಲೆ ಹೆಚ್ಚಾಗಿದ್ದು ರಂಜಕ ಮತ್ತು ಪೊಟ್ಯಾಷ್ ಬೇಡಿಕೆಯಲ್ಲಿ ಇಳಿಮುಖ ಕಂಡು ಬಂದಿರುತ್ತದೆ.

ಇ) ಮಾಹಿತಿಯನ್ನು ಲಗತ್ತಿಸಿದೆ.

ಈ) ಕೇಂದ್ರದ ಸಬ್ಸಿಡಿಯನ್ನು ಈಗಾಗಲೇ ನೀಡುತ್ತಿರುವುದರಿಂದ ಪುನಃ ಸಬ್ಸಿಡಿ ನೀಡುವ ಪ್ರಶ್ನೆ ಬರುವುದಿಲ್ಲ. ಆದಾಗ್ಯೂ ಈಗಿರುವ ಸಬ್ಸಿಡಿಯನ್ನು ಹೆಚ್ಚಿಸಿ ಅನಿಯಂತ್ರಣಕ್ಕಿಂತ ಪೂರ್ವದಲ್ಲಿದ್ದಂತೆ ರಸಗೊಬ್ಬರಗಳ ಬೆಲೆ ಇಳಿಸಲು ರಾಜ್ಯಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಿದೆ.

ಅಲ್ಲದೆ ಅನಿಯಂತ್ರಣಗೊಂಡು ಬೆಲೆ ಹೆಚ್ಚಾಗಿರುವ ರಂಜಕ, ಪೊಟ್ಯಾಷ್ ರಸಗೊಬ್ಬರಗಳಿಗೆ ರಾಜ್ಯ ಸರ್ಕಾರ ಮಾರಾಟ ತೆರಿಗೆಯನ್ನು ರದ್ದುಮಾಡಿದೆ.

ಕಳೆದ ಮೂರು ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ ನಿಯಂತ್ರಣದಲ್ಲಿರುವ ರಸಗೊಬ್ಬರದ ಬೇಡಿಕೆ, ಪೂರೈಕೆ ಮತ್ತು ಉಪಯೋಗ

ಶ್ರೀ ಬಿ.ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ, ನಾನು ಎರಡು ಕ್ಲಾರಿಫಿಕೇಷನ್ ಮಾತ್ರ ಕೇಳುತ್ತೇನೆ. ತಮಗೆ ಗೊತ್ತಿರಬಹುದು ರಂಜಕ ಮತ್ತು ಪೊಟ್ಯಾಷ್ ಗೊಬ್ಬರಗಳು ಪಕ್ಕದ ರಾಜ್ಯಗಳಾದ ಆಂಧ್ರ ಮತ್ತು ತಮಿಳುನಾಡಿನಲ್ಲಿ ಒಂದು ಟನ್‌ಗೆ 20 ರಿಂದ 30 ರೂಪಾಯಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಇದನ್ನು ಸರಿಪಡಿಸುತ್ತೀರಾ? ಎರಡನೆಯದಾಗಿ, ತಾವು ಸಹಕಾರಿ ಸಚಿವರಿಗೂ ಹೇಳಬೇಡಿ, ತಮಗೆ ಅನುಭವವಿದೆ, ಇವತ್ತು ಮಾರ್ಕೆಟಿಂಗ್ ಫೆಡರೇಶನ್‌ನಲ್ಲಿ ಕಾರ್ಖಾನೆಗಳಿಂದ ಗೊಬ್ಬರವನ್ನು ತರುವುದನ್ನು ನಿಲ್ಲಿಸಿರುವುದರಿಂದ ಸ್ಪೆಷಲ್ "ಏ" ಕಾಂಪೋನೆಂಟಿಗೆ ಏನು ಸಹಕಾರ ಸಂಘದಿಂದ ರೈತ ಸಾಲವನ್ನು ಪಡೆಯುತ್ತಾನೆ, ಏ ಕಾಂಪೋನೆಂಟಿಗೆ ಸಾಲವನ್ನು ಕೊಡುತ್ತೇವೆ. "ಬಿ" ಕಾಂಪೋನೆಂಟಗೆ ಗೊಬ್ಬರವನ್ನು ಒದಗಿಸುತ್ತೇವೆ. ಅದರ ಫೆಡರೇಷನಗಳು ಗೊಬ್ಬರವನ್ನೇ ಖರೀದಿ ಮಾಡದಿರುವುದರಿಂದ ರೈತನು ಇವತ್ತು ತ್ರಿಶಂಕು ಸ್ಥಿತಿಯಲ್ಲಿದ್ದಾನೆ, ಅವನಿಗೆ ಗೊಬ್ಬರ ಸಿಗುತ್ತಿಲ್ಲ. ಮೂರನೆಯದಾಗಿ ತಾವೇ ಹೇಳಿಕೆ ಕೊಟ್ಟಿರುವ ಪ್ರಕಾರ 1991-92ರಲ್ಲಿ 9.5 ಲಕ್ಷ ಟನಗಳಷ್ಟಿದ್ದ ರಸಗೊಬ್ಬರದ ಬಳಕೆ 1992-93ರಲ್ಲಿ 8.11 ಲಕ್ಷಕ್ಕೆ ಇಳಿದಿದೆ, 93-94ರಲ್ಲಿ ಬಳಕೆ ಇನ್ನು ಸಹ ಕಡಿಮೆಯಾಗುತ್ತಿದೆ. ನಾನು ತಮ್ಮಲ್ಲಿ ಕೇಳುವುದೇನೆಂದರೆ, ಮಾರ್ಕೆಟಿಂಗ್ ಫೆಡರೇಷನ್ ಗೊಬ್ಬರವನ್ನು ಖರೀದಿ ಮಾಡದಿರುವುದರಿಂದ ರೈತ ದುಬಾರಿ ಬೆಲೆಗೆ ಗೊಬ್ಬರವನ್ನು ಕೊಂಡುಕೊಳ್ಳುವಂತಾಗಿದೆ, 'ಬಿ' ಕಾಂಪೋನೆಂಟ್‌ಗೆ ಕ್ಯಾಷ್ ಸಹ ಕೊಟ್ಟಿಲ್ಲ ಗೊಬ್ಬರವನ್ನು ಸಹ ಕೊಟ್ಟಿಲ್ಲದಿರುವುದರಿಂದ ರೈತ ತ್ರಿಶಂಕು ಸ್ಥಿತಿಯಲ್ಲಿ ಇದ್ದಾನೆ. ಪಕ್ಕದ ರಾಜ್ಯದಲ್ಲಿ ಗೊಬ್ಬರ ಕಡಿಮೆ ಬೆಲೆಗೆ ಸಿಗುತ್ತದೆ, ಅದನ್ನು ಇಲ್ಲಿ ತಂದು ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಆದ್ದರಿಂದ ನೀವೇನಾದರೂ ಸಬ್ಸಿಡಿಯನ್ನು ಕೊಟ್ಟು ಕಡಿಮೆ ಬೆಲೆಗೆ ಗೊಬ್ಬರವನ್ನು ಮಾರಾಟ ಮಾಡಲು ವ್ಯವಸ್ಥೆಯನ್ನು ಮಾಡುತ್ತೀರೋ?

ಶ್ರೀ ಸಿ. ಬೈರೇಗೌಡ:- ಸನ್ಮಾನ್ಯ ಅಧ್ಯಕ್ಷರೆ, ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ ನಾನು ಉತ್ತರವನ್ನು ಹೇಳಲು ಆಗುವುದಿಲ್ಲ. ಆದರೆ ನಮ್ಮದೇ ಆದಂಥ ಸಂಸ್ಥೆಯಾದ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ. ಅಲ್ಲಿ ಗೊಬ್ಬರವನ್ನು ಸರಬರಾಜು ಮಾಡತಕ್ಕ ವ್ಯವಸ್ಥೆ ಇದೆ.

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ನಿಯಂತ್ರಣದಲ್ಲಿರುವ ರಸಗೊಬ್ಬರದ ಬೇಡಿಕೆ, ಪೂರೈಕೆ ಮತ್ತು ಉಪಯೋಗ

(ಟನ್‌ಗಳಲ್ಲಿ)

ಕ್ರ ಸಂ	ರಸಗೊಬ್ಬರ	1992-93			1993-94			1994-95		
		ಬೇಡಿಕೆ	ಪೂರೈಕೆ	ಉಪಯೋಗ	ಬೇಡಿಕ	ಪೂರೈಕೆ	ಉಪಯೋಗ	ಬೇಡಿಕೆ	ಪೂರೈಕೆ	ಉಪಯೋಗ
1	ಯುರಿಯಾ	840380	643735	583745	62674	713244	683828	716796	762348	743845

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಅನಿಯಂತ್ರಣ ರಸಗೊಬ್ಬರಗಳು:ಕಾಂಪ್ಲೆಕ್ಸ್
ಗೊಬ್ಬರಗಳ ಬೇಡಿಕೆ ಪೂರೈಕೆ ಮತ್ತು ಉಪಯೋಗ

(ಟನ್‌ಗಳಲ್ಲಿ)

ಕ್ರ ಸಂ	ರಸಗೊಬ್ಬರ: ಕಾಂಪ್ಲೆಕ್ಸ್	1992-93			1993-94			1994-95		
		ಬೇಡಿಕೆ	ಪೂರೈಕೆ	ಉಪಯೋಗ	ಬೇಡಿಕೆ	ಪೂರೈಕೆ	ಉಪಯೋಗ	ಬೇಡಿಕೆ	ಪೂರೈಕೆ	ಉಪಯೋಗ
1	ಅಮೊನಿಯ ಸಲ್ಫೇಟ್	40000	38185	36319	60000	47294	46335	55000	47051	36680
2	ಸಿ.ಎ.ಎನ್	28000	29948	21948	50000	24913	24913	40000	33244	33220
3	ಅಮೊನಿಯಕ್ಲೊರೈಡ್	6000	5862	5862	11000	11266	11254	10000	5638	4965
4	ಶಿಲಾರಂಜಕ	39000	29286	28200	29333	22680	20841	26556	41505	34075
5	ಸ.ಪೊಟ್ಯಾಷ್	3000	6304	5204	5700	5213	2457	4000	5635	3291
6	ಡಿ.ಎ.ಪಿ.	403783	416931	330432	200000	232593	206160	262304	198000	162759
7	ಮು.ಪೊಟ್ಯಾಷ್	170833	175039	101939	110000	113513	104352	136617	134571	113413
8	ಸೂಪರಫಾಸ್ಪೇಟ್	65000	24988	21950	55000	53504	51568	65000	52001	50045
9	19:19:19	90000	61661	60172	60000	564330	50321	55000	52551	52073
10	17:17:17	190000	254033	210592	215000	188562	166622	183000	183533	179682
11	15:15:15	100000	66100	19238	60000	64450	54618	65000	60766	56827
12	10:26:26	43000	23260	17947	30000	26305	23991	30000	20336	20243
13	12:32:16	12000	2857	2502	7000	6555	6428	12000	3779	3652
14	20:20:0	140000	173924	132581	140000	254368	220634	188000	252696	231207
15	16:20:0	55000	40858	33298	40000	54934	52404	60000	63620	55418
16	23:23:0	4000	4834	4834	6000	645	645	7000	1246	1055
17	28:28:0	—	—	—	—	—	—	—	2087	2087
18	14:28:0	—	—	—	—	—	—	—	—	—
	ಒಟ್ಟು	12,21,783	13,40,073	10,62,958	11,390,33	11,63,195	10,43,543	11,99,477	11,58,059	10,40.692

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ನಿಯಂತ್ರಿತ ಮತ್ತು ಅನಿಯಂತ್ರಿತ ರಸಗೊಬ್ಬರಗಳ ಬೇಡಿಕೆ, ಪೂರೈಕೆ ಮತ್ತು ಉಪಯೋಗ (ಟನ್‌ಗಳಲ್ಲಿ)

ಕ್ರ. ಸಂ.	ರಸಗೊಬ್ಬರಗಳು (ನಿಯಂತ್ರಿತ ಅನಿಯಂತ್ರಿತ)	1992-93			1993-94			1994-95		
		ಬೇಡಿಕೆ	ಪೂರೈಕೆ	ಉಪಯೋಗ	ಬೇಡಿಕೆ	ಪೂರೈಕೆ	ಉಪಯೋಗ	ಬೇಡಿಕೆ	ಪೂರೈಕೆ	ಉಪಯೋಗ
1.	ನಿಯಂತ್ರಣ ರಸಗೊಬ್ಬರ (ಯೂರಿಯಾ)	646380	643735	583745	622674	713244	683328	716796	762348	743845
2.	ಅನಿಯಂತ್ರಣ ರಸಗೊಬ್ಬರಗಳು/ (ಕಾಂಪ್ಲೆಕ್ಸ್‌ಗಳು)	1221783	1340073	1062958	1139033	1163195	1043543	1199477	1158059	1040692
	ಒಟ್ಟು	**1868163**	**1983808**	**1646703**	**1761707**	**1876439**	**1726871**	**1916273**	**1920407**	**1784537**

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಪೋಷಕಾಂಶಗಳ ಬೇಡಿಕೆ, ಪೂರೈಕೆ ಮತ್ತು ಉಪಯೋಗ.

(ಟನ್‌ಗಳಲ್ಲಿ)

ಕ್ರ ಸಂ	ಪೋಷಕಾಂಶಗಳು	1992-93			1993-94			1994-95		
		ಬೇಡಿಕೆ	ಪೂರೈಕೆ	ಉಪಯೋಗ	ಬೇಡಿಕೆ	ಪೂರೈಕೆ	ಉಪಯೋಗ	ಬೇಡಿಕೆ	ಪೂರೈಕೆ	ಉಪಯೋಗ
1.	ಸಾರಜನಕ	502896	495004	432603	447000	504413	472816	505000	520076	494690
2.	ರಂಜಕ	330860	281221	254962	238000	243020	215820	250000	228068	202232
3.	ಪೊಟ್ಯಾಷ್	183040	178596	123451	135000	131053	116403	145000	130718	125821
	ಒಟ್ಟು	**1016796**	**954821**	**811016**	**820000**	**878486**	**805039**	**900000**	**878862**	**822743**

ಅನಂತರ ಪಕ್ಕದ ರಾಜ್ಯದಲ್ಲಿ ನಮಗಿಂತ ಕಡಿಮೆ ಬೆಲೆಯಲ್ಲಿ ಗೊಬ್ಬರ ದೊರೆಯುತ್ತಿದೆಯೆಂದು ಹೇಳಿದ್ದಾರೆ, ರಂಜಕ ಮತ್ತು ಪೊಟ್ಯಾಷ್ ಎಂದರೆ ಅದು ಸ್ಟೈಟ್ ಫರ್ಟಿಲೈಸರ್ ಆಗುತ್ತದೆ. ಆ ರೀತಿ ರಂಜಕ ಮತ್ತು ಪೊಟ್ಯಾಷ್‌ನ್ನು ಸ್ಟೈಟ್ ಫರ್ಟಿಲೈಸರ್ ಆಗಿ ಉಪಯೋಗ ಮಾಡಲು ಆಗುವುದಿಲ್ಲ. ರಂಜಕ ಮತ್ತು ಪೊಟ್ಯಾಷ್ ಮತ್ತು ನೈಟ್ರೊಜನ್ ಮೂರೂ ಸೇರಿ ಅದು ಕಾಂಪ್ಲೆಕ್ಸ್ ಫರ್ಟಿಲೈಸರ್ ಆಗುತ್ತದೆ, ಅದಕ್ಕೆ ಗರಿಷ್ಟ ರೀಟೈಲ್ ಬೆಲೆಯೆಂದು ಎಲ್ಲ ಮಾರಾಟ ಮಾಡುತ್ತಿದ್ದಾರೆ ಅವರ ಮೇಲೆ ಈಗಾಗಲೆ ಕ್ರಮ ತೆಗೆದುಕೊಂಡಿದ್ದೇವೆ. ಉದಾಹರಣೆಗೆ, ಮೂರು ದಿವಸಗಳ ಹಿಂದೆ ಹುಬ್ಬಳ್ಳಿ ಮತ್ತು ದಾವಣಗೆರೆ ನಗರದಲ್ಲಿ ಗೊಬ್ಬರವನ್ನು ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿರತಕ್ಕದ್ದು ನಮ್ಮ ಗಮನಕ್ಕೆ ಬಂದಿತ್ತು. ನಾವು ಅವರ ಮೇಲೆ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯಿಂದ ಕ್ರಮ ತೆಗೆದುಕೊಳ್ಳುತ್ತಿದ್ದೇವೆ, ಮತ್ತು ಇಲಾಖೆಯ ಮಟ್ಟದಲ್ಲೂ ಸಹ ಕ್ರಮತೆಗೆದುಕೊಳ್ಳುವಂತೆ ಮಾಡಿದ್ದೇನೆ. ಶಿವಮೊಗ್ಗ ಮತ್ತು ಮೈಸೂರಿನ ಗೊಬ್ಬರದ ಅಂಗಡಿಯಲ್ಲಿ ಯಾವ ಬೆಲೆಗೆ ಗೊಬ್ಬರವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಪರಿಶೀಲನೆ ಮಾಡಿ ಎಂದು ಕಮರ್ಶಿಯಲ್ ಟ್ಯಾಕ್ಸ್ ಅಧಿಕಾರಿಗಳಿಗೆ ತಿಳಿಸಿದ್ದೇನೆ, ಸಂಜೆಯೊಳಗೆ ವರದಿ ಬರುತ್ತದೆ, ಆ ರೀತಿ ನಾವು ಏನು ಬೆಲೆಯನ್ನು ನಿಗದಿ ಮಾಡಿದ್ದರೋ ಅದಕ್ಕಿಂತ ಹೆಚ್ಚು ಬೆಲೆಗೆ ಗೊಬ್ಬರವನ್ನು ಮಾರಾಟ ಮಾಡುತ್ತಿದ್ದಾರೆ ಅವರ ಮೇಲೆ ಬಹಳ ಕಠಿಣವಾದಂಥ ಕ್ರಮ ಮತ್ತು ಅವರ ಮೇಲೆ ಕಾನೂನಿನ ರೀತಿಯಲ್ಲಿ ಕೇಸುಗಳನ್ನು ನೊಂದಾವಣೆ ಮಾಡುತ್ತೇವೆ. ಪ್ರತಿನಿತ್ಯ ಇದನ್ನು ಇನ್ನು ಮುಂದೆ ಮಾಡಿಸುತ್ತೇನೆ. ಗರಿಷ್ಟ ರೀಟೇಲ್ ಬೆಲೆಗಿಂತ ಜಾಸ್ತಿ ಬೆಲೆಗೆ ಎಲ್ಲೂ ಗೊಬ್ಬರವನ್ನು ಮಾರಾಟ ಮಾಡುವುದಕ್ಕಾಗುವುದಿಲ್ಲ. ಹೊರ ರಾಜ್ಯಗಳಲ್ಲಿ ಯಾವ ರೀತಿಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ತರಿಸಿ- ಆ ರೀತಿ ಏನಾದರೂ ವ್ಯತ್ಯಾಸವಿದ್ದರೆ ಏನು ಮಾಡಬಹುದು ಎಂದು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಎನ್ನುವ ಸಂಸ್ಥೆಯಿಂದ ಗೊಬ್ಬರವನ್ನು ವಿತರಣೆ ಮಾಡುತ್ತೇವೆಂದು ಹೇಳಿರುವುದು ನಿಜ. ಇವತ್ತು ಎಷ್ಟು ಆಗ್ರೋ ಇಂಡಸ್ಟ್ರೀಸ್ ಕೇಂದ್ರಗಳಿವೆ, ಎಲ್ಲಾದರೂ ಒಂದು ಕಡೆ ಗೊಬ್ಬರವನ್ನು ತಂದು ವಿತರಣೆಯಾಗುತ್ತಿದೆ ಎನ್ನುವ ಬಗ್ಗೆ ತೋರಿಸಿದರೆ ನಾನು ತಲೆಬಾಗುತ್ತೇನೆ. ನಿಮ್ಮಲ್ಲಿ ಅಗತ್ಯವಿರುವಷ್ಟು ಆಗ್ರೋ ಇಂಡಸ್ಟ್ರೀಸ್ ಕೇಂದ್ರಗಳಿಲ್ಲ, ಅಲ್ಲಿ ಗೊಬ್ಬರ ವಿತರಣೆಯಾಗುತ್ತಿಲ್ಲ. ಅದು ಸಹಕಾರಿ ಇಲಾಖೆಗೆ ಸಂಬಂಧಪಟ್ಟಿದ್ದರೂ ಸಹ ಇವತ್ತು ಫೆಡರೇಷನ್ ಕಾರ್ಖಾನೆಯವರಿಂದ ಗೊಬ್ಬರವನ್ನೇ ಖರೀದಿ ಮಾಡುತ್ತಿಲ್ಲ, ಆ ಸ್ಥಿತಿಗೆ ಅದು ಬಂದಿರಬೇಕಾದರೆ, ಅದ್ದರಿಂದ ಜವಾಬ್ದಾರಿ ಇರತಕ್ಕ ಕೃಷಿ ಇಲಾಖೆಯವರು ಅವರ ಜೊತೆ ಚರ್ಚೆ ಮಾಡಿ ಸರಿಪಡಿಸತಕ್ಕದ್ದು, ಮೂರನೆಯದಾಗಿ ರಾಜ್ಯದಲ್ಲಿ ಪಕ್ಕದ ರಾಜ್ಯದಲ್ಲಿ ಕಡಿಮೆ ಬೆಲೆಗೆ ಗೊಬ್ಬರ ಸಿಗುತ್ತದೆ, ನಮ್ಮಲ್ಲಿ ಎಲ್ಲೇ ಹೋದರೂ ಸಹ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿರುವ ಸ್ಥಿತಿ ಇದೆ, ಅದನ್ನು ನಿಯಂತ್ರಣ ಮಾಡಲು ಆಗದಿರುವ ಪರಿಸ್ಥಿತಿ ಇರಬೇಕಾದರೆ ನಿಮಗೆ ಇರತಕ್ಕದ್ದು. ಒಂದೇ ಒಂದು ಮಾರ್ಗ ಆಗ್ರೋ ಇಂಡಸ್ಟ್ರೀಸ್ ಮೂಲಕ, ಫೆಡರೇಷನ್ ಮೂಲಕ ಸರಿಯಾದ ಬೆಲೆಗೆ ಗೊಬ್ಬರವನ್ನು ವಿತರಣೆ ಮಾಡಬೇಕು, ಇದರಲ್ಲೂ ಸಹ ತಾವು ವಿಫಲರಾಗಿದ್ದೀರಿ, ದಯಮಾಡಿ ಎಷ್ಟು ಆಗ್ರೋ ಕೇಂದ್ರಗಳಿವೆ ಎಂದು ಹೇಳಿ?

ಶ್ರೀ ಸಿ. ಬೈರೇಗೌಡ:- ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಗರಿಷ್ಟ ರೀಟೇಲ್ ಬೆಲೆಯನ್ನು ನಾವು ನಿಗದಿ ಮಾಡುತ್ತೇವೆ. ಇದಕ್ಕಿಂತ ಹೆಚ್ಚು ಬೆಲೆಗೆ ಎಲ್ಲಿ ಮಾರಾಟ ಮಾಡುತ್ತಿದ್ದಾರೆ ಅವರ ಮೇಲೆ ಕೇಸನ್ನು ನೊಂದಾವಣೆ ಮಾಡಿಸಿದ್ದೇವೆ. ಇದರ ಬಗ್ಗೆ ನನಗೆ ಯಾರೂ ಸಹ ಹೇಳಿಲ್ಲ. ನಾನೇ ಕ್ರಮತೆಗೆದುಕೊಂಡಿದ್ದೇನೆ. ಹುಬ್ಬಳ್ಳಿ ಮತ್ತು ದಾವಣಗೆರೆಯಲ್ಲಿ ಇರತಕ್ಕ ನಮ್ಮ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ಇದಕ್ಕೆ ಸಂಬಂಧಪಟ್ಟಂತೆ ಅಮಾನತ್ತಿನಲ್ಲಿಡಬೇಕೆಂದು ಆಜ್ಞೆ ಕೊಟ್ಟಿದ್ದೇನೆ. ಇವತ್ತು ಮೈಸೂರು, ಶಿವಮೊಗ್ಗದಲ್ಲಿ ಇರತಕ್ಕ ಅಧಿಕಾರಿಗಳು ಸರಿಯಾದ ವ್ಯವಸ್ಥೆ ಮಾಡದಿದ್ದರೆ ಅವರ ಮೇಲೂ ಸಹ ಅಗತ್ಯವಾದ ಕ್ರಮತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ನಾವೇನು ಬೆಲೆಯನ್ನು ನಿಗಧಿ ಮಾಡಿದ್ದೇವೆ ಅದಕ್ಕಿಂತ ಜಾಸ್ತಿ ಬೆಲೆಗೆ ಗೊಬ್ಬರವನ್ನು ಮಾರಾಟ ಮಾಡಲು ಬಿಡುವುದಿಲ್ಲ. ಅದಕ್ಕೆ ಅವಕಾಶ ಮಾಡಿಕೊಡತಕ್ಕ ಅಧಿಕಾರಿಗಳ ಮೇಲೆ ಕ್ರಮತೆಗೆದುಕೊಳ್ಳುತ್ತೇವೆ. ಯಾರೂ ಆ ರೀತಿ ಮಾರಾಟ ಮಾಡುತ್ತಾರೆ ಅವರ ಮೇಲೂ ಸಹ ಕಮರ್ಶಿಯಲ್ ಟ್ಯಾಕ್ಸ್ ಆಕ್ಟ್ ಪ್ರಕಾರ ಮತ್ತು ನಮ್ಮ ಪರವಾಗಿ ಏನಿದೆ ಅದನ್ನು ರದ್ದು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಇದನ್ನು ತಾವು ದಯವಿಟ್ಟು ಗಮನಿಸಬೇಕು. ಪಕ್ಕದ ರಾಜ್ಯದಲ್ಲೇನು ಕಡಿಮೆ ಬೆಲೆಗೆ ಗೊಬ್ಬರ ಸಿಗುತ್ತಿದ್ದು ನಮ್ಮಲ್ಲೇನು ಜಾಸ್ತಿ ಬೆಲೆಗೆ ಗೊಬ್ಬರ ಮಾರಾಟವಾಗುತ್ತಿದೆ ಅದರ ಬಗ್ಗೆ ಸಹ ಪಕ್ಕದ ರಾಜ್ಯದಿಂದ ಮಾಹಿತಿಯನ್ನು ತರಿಸಿ ನೋಡುತ್ತೇನೆ. ನಮ್ಮಲ್ಲಿ ಸುಮಾರು 150 ಆಗ್ರೋ ಕೇಂದ್ರಗಳಿವೆ, ಆ ಕೇಂದ್ರಗಳನ್ನು ಶವಸಂಸ್ಕಾರ ಮಾಡಲು ಸ್ಮಶಾನಕ್ಕೆ ತೆಗೆದುಕೊಂಡು ಹೋಗಲಾಗಿತ್ತು, ಆದರೆ ಅದಕ್ಕೆ ನಾವು ಪುನಃ ಜೀವನವನ್ನು ಕೊಡತಕ್ಕ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಆ ಆಗ್ರೋ ಸಂಸ್ಥೆಗಳನ್ನು ಶವಸಂಸ್ಕಾರವನ್ನಾದರು ಮಾಡಿ ಇಲ್ಲದಿದ್ದರೆ ಮುಚ್ಚುವುದಾಗಿದ್ದರೆ ಮುಚ್ಚಿ, ಆದರೆ ತಾವು ಆಗ್ರೋ ಕೇಂದ್ರದಿಂದ ಗೊಬ್ಬರವನ್ನು ವಿತರಣೆ ಮಾಡುತ್ತಿದ್ದೇವೆಂದು ಹೇಳಿದ್ದೀರಿ, ನೀವೇ ಆ 150 ಕೇಂದ್ರ ಸಾಯುವ ಸ್ಥಿತಿಯಲ್ಲಿದೆಯೆಂದು ಹೇಳುತ್ತಿದ್ದೀರಿ, ಇವತ್ತು ಗೊಬ್ಬರವನ್ನು ವಿತರಣೆ ಮಾಡಲು ವ್ಯವಸ್ಥೆ ಇರತಕ್ಕ ಆಗ್ರೋ ಕೇಂದ್ರಗಳೆಷ್ಟು?

ಫೆಡರೇಷನ್‌ಗಳು ಗೊಬ್ಬರವನ್ನು ಖರೀದಿ ಮಾಡದಿರುವ ಈ ಸಂದರ್ಭದಲ್ಲಿ ರೈತನ ಪರಿಸ್ಥಿತಿಯನ್ನು ಸುಧಾರಣೆ ಮಾಡಲು ಕೃಷಿ ಸಚಿವರಾಗಿ ಪರ್ಯಾಯವಾದ ವ್ಯವಸ್ಥೆ ಏನು ಮಾಡುತ್ತೀರೆಂದು ನೇರವಾಗಿ ಉತ್ತರವನ್ನು ಕೊಡಿ.

ಶ್ರೀ ಸಿ. ಬೈರೇಗೌಡ:- ನನ್ನ ಗಮನಕ್ಕೆ ಬಂದ ಪ್ರಕಾರ ಗೊಬ್ಬರವನ್ನು ಉತ್ಪಾದನೆ ಮಾಡುವ ಸ್ಥಳದಿಂದ ತರಲು ರೈಲ್ವೇ ವ್ಯಾಗನ್‌ಗಳ ಕೊರತೆ ಇದೆ. ಇದನ್ನೂ ಸಹ ಸಂಬಂಧಪಟ್ಟವರ ಜೊತೆ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು: ಸನ್ಯಾಸ್ಯ ವಿರೋಧ ಪಕ್ಷದ ನಾಯಕರ ಪ್ರಶ್ನೆ ಬಹಳ ನೇರವಾಗಿದೆ ಮತ್ತು ಸರಳವಾಗಿದೆ. ಅವುಗಳೆಂದರೆ, ಆಗ್ರೋ ಕೇಂದ್ರಗಳು ಎಷ್ಟಿದೆ? ಅದರಲ್ಲಿ ಗೊಬ್ಬರವನ್ನು ಸರಬರಾಜು ಮಾಡತಕ್ಕ ಚೈತನ್ಯ ಎಷ್ಟು ಕೇಂದ್ರಕ್ಕಿದೆ ಎಂಬ ಬಗ್ಗೆ ದಯಮಾಡಿ ಉತ್ತರವನ್ನು ಕೊಡಿ.

ಶ್ರೀ ಸಿ.ಬೈರೇಗೌಡ: ಅದನ್ನು ಹೇಳುವುದಕ್ಕೆ ಹೋದೆ, ಅವರು ಪೂರ್ತಿ ಹೇಳಲು ನನಗೆ ಬಿಡಲಿಲ್ಲ. ಆ ಆಗ್ರೋ ಕೇಂದ್ರಗಳನ್ನು ರಿವೈವ್ ಮಾಡತಕ್ಕ ಕೆಲಸವನ್ನು ನಾವು ಈಗ ಮಾಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮ್ಮಲ್ಲಿರುವ ಆಗ್ರೋ ಕೇಂದ್ರದಲ್ಲಿ ಎಷ್ಟು ಕೇಂದ್ರ ಗೊಬ್ಬರವನ್ನು ವಿತರಣೆ ಮಾಡುತ್ತಿವೆ?

ಶ್ರೀ ಸಿ. ಬೈರೇಗೌಡ: ನಮ್ಮಲ್ಲಿ 150 ಆಗ್ರೋ ಕೇಂದ್ರಗಳಿವೆ. ಪ್ರತಿಯೊಂದು ಕೇಂದ್ರದ ಬಗ್ಗೆಯೂ ಸಹ ಪ್ರಶ್ನೆ ಕೇಳಿದರೆ ನಾನು ಉತ್ತರವನ್ನು ಹೇಳಲು ಸಾಧ್ಯವಾಗುವುದಿಲ್ಲ. ಆದರೆ, ರಾಜ್ಯದಲ್ಲಿ ಒಟ್ಟಾರೆ ಎಷ್ಟು ಗೊಬ್ಬರವನ್ನು ನಾವು ಸರಬರಾಜು ಮಾಡಿದ್ದೇವೆಂದರೆ 28,465 ಟನ್. ಅದನ್ನು ಆಗ್ರೋ ಇಂಡಸ್ಟ್ರೀಸ್ ಮೂಲಕ ಸರಬರಾಜು ಮಾಡಿದ್ದೇವೆ.

ಶ್ರೀ. ಬಿ.ಎಸ್. ಯಡಿಯೂರಪ್ಪ:- ನಿಮ್ಮ ಆಗ್ರೋ ಕೇಂದ್ರಗಳಲ್ಲಿ ಬದುಕಿರುವುದೆಷ್ಟು, ಸತ್ತಿರುವುದೆಷ್ಟು ಎಂಬ ಬಗ್ಗೆ ನಾನು ಕೇಳಲಿಲ್ಲ. ನಾಳೆ ಸದನದ ಸಮಿತಿಯನ್ನು ಮಾಡಿ ಅಧ್ಯಕ್ಷರು ಕಳಿಸಿಕೊಟ್ಟರೆ, ಅಥವಾ ನೀವೇ ನನ್ನ ಜೊತೆ ಬಂದರೆ ಎಷ್ಟು ನಿಮ್ಮ ಆಗ್ರೋ ಕೇಂದ್ರಗಳು ಗೊಬ್ಬರವನ್ನು ವಿತರಣೆ ಮಾಡುವ ಚೈತನ್ಯವನ್ನು ಹೊಂದಿ ಬದುಕಿದ್ದಾವೆ ಎಂಬ ಬಗ್ಗೆ ತಿಳಿಯಬಹುದು.

ಶ್ರೀ ಸಿ. ಬೈರೇಗೌಡ:- ಕರಾರುವಾಕ್ಕಾಗಿ ಅಂಕಿಅಂಶ ನನ್ನ ಹತ್ತಿರ ಇಲ್ಲ. ಆದರೆ 1994-95ನೇ ಸಾಲಿನಲ್ಲಿ ಒಟ್ಟಾರೆ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಂದ 28,465 ಟನ್ ಗೊಬ್ಬರವನ್ನು ಮಾರಾಟ ಮಾಡಿದ್ದೇವೆ. ಈ ವರ್ಷದಲ್ಲಿ ಇಲ್ಲಿಯವರೆಗೆ ನಾವು 22 ಸಾವಿರ ಟನ್ ಗೊಬ್ಬರವನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಮಾರಾಟ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದರ ಬಗ್ಗೆ ಪ್ರಶ್ನೆಯನ್ನು ನಿಲ್ಲಿಸಿ ಅರ್ಧ ಗಂಟೆಯ ಚರ್ಚೆಗಾದರೂ ಅವಕಾಶ ಮಾಡಿಕೊಡಿ ಅಧ್ಯಕ್ಷರೆ, ಇಲ್ಲದಿದ್ದರೆ ಅವರು ನೇರವಾಗಿ ಉತ್ತರವನ್ನು ಕೊಡಲು ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಅವರು ಉತ್ತರವನ್ನು ಕೊಡುವ ಸ್ಥಿತಿಯಲ್ಲಿ ಇಲ್ಲವೆಂದು ಹೇಳಿ ರೈತರ ಪರವಾಗಿ ಮತ್ತೊಮ್ಮೆ ನಾವು ಸಭೆಯಿಂದ ನಿರ್ಗಮನ ಮಾಡಬೇಕಾಗುತ್ತದೆ, ಅವರು ಅವಕಾಶ ಕೊಟ್ಟರೆ ನಾವು ಹೋಗುತ್ತೇವೆ.

ಅಧ್ಯಕ್ಷರು: ದಯಮಾಡಿ ಬೇಡ. ನೀವು ಐದು ವರ್ಷ ಇಲ್ಲೇ ಇರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮಗೆ ಸಮಾಧಾನವಾಗಿದ್ದರೆ ಸರಿ. ನಮ್ಮ ರಕ್ಷಣೆಗೆ ನೀವು ಬರಬೇಕು, ಅವರು ಜವಾಬ್ದಾರಿಯಿಂದ ಜಾರಿಕೊಳ್ಳುವುದರಲ್ಲಿ ಬುದ್ಧಿವಂತರು: ಅವರು ನೇರವಾಗಿ ಉತ್ತರವನ್ನು ಕೊಡುವುದಿಲ್ಲವೆನ್ನುವುದರಲ್ಲಿ ನಮಗೆ ನಂಬಿಕೆ ಇದೆ. ನಾನು ತಮ್ಮಮೂಲಕ ಕೇಳುತ್ತೇನೆ, ಇವತ್ತು ಎಷ್ಟು ಆಗ್ರೋ ಕೇಂದ್ರಗಳ ಮೂಲಕ ಗೊಬ್ಬರ ವಿತರಣೆಯಾಗುತ್ತಿದೆ?

ಶ್ರೀ ಸಿ. ಬೈರೇಗೌಡ:- ತಾವು ಪ್ರಶ್ನೆಯನ್ನು ದಯಮಾಡಿ ನೋಡಿ, ಅದರಲ್ಲಿ ಆಗ್ರೋ ಕೇಂದ್ರಗಳ ಬಗ್ಗೆ ಪ್ರಸ್ತಾಪವಿಲ್ಲ, ಅಲ್ಲಿ ಸಬ್ಸಿಡಿಯೆಷ್ಟು, ಎಷ್ಟು ಗೊಬ್ಬರ ಮಾರಾಟವಾಗಿದೆ ಎನ್ನುವ ಬಗ್ಗೆ

ಪ್ರಸ್ತಾಪವಾಗಿದೆ. ಆಗ್ರೋ ಕೇಂದ್ರದ ಬಗ್ಗೆ ದಿಢೀರ್ ಎಂದು ಪ್ರಶ್ನೆ ಕೇಳಿದರೆ ನಾನು ಯಾವ ರೀತಿ ಉತ್ತರವನ್ನು ಹೇಳಲು ಸಾಧ್ಯವಾಗುತ್ತದೆ? ಒಟ್ಟಾರೆ ಹೋದ ವರ್ಷದಲ್ಲಿ ಎಷ್ಟು ಗೊಬ್ಬರ ಆಗ್ರೋ ಇಂಡಷ್ಟ್ರೀಸ್ ಮೂಲಕ ಮಾರಾಟವಾಗಿದೆ ಎನ್ನುವ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ. ಈ ವರ್ಷದ ಅಂಕಿಅಂಶವನ್ನು ಕೊಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿಮ್ಮ ಉತ್ತರವನ್ನು ರಾಜ್ಯದ ಜನರು ಕೇಳುತ್ತಿರುತ್ತಾರೆ.

(ಗೊಂದಲ)

ಇದು ಬೇಜವಾಬ್ದಾರಿಯ ಪರಮಾವಧಿ, ನೀವು ಕೃಷಿ ಸಚಿವರಾಗಿ ಎಷ್ಟು ಆಗ್ರೋ ಕೇಂದ್ರದಿಂದ ಗೊಬ್ಬರ ವಿತರಣೆಯಾಗುತ್ತಿದೆ ಎಂಬ ಬಗ್ಗೆ ಉತ್ತರ ಹೇಳುವುದಿಲ್ಲವೆಂದರೆ ಹೇಗೆ? ನಿಮ್ಮ ಜವಾಬ್ದಾರಿಯಿಂದ ನೀವು ಸಂಪೂರ್ಣವಾಗಿ ತಪ್ಪಿಸಿಕೊಳ್ಳುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ: ಅದು ನಿಮ್ಮ ಅಭಿಪ್ರಾಯ. ಒಟ್ಟು 150 ಆಗ್ರೋ ಕೇಂದ್ರಗಳಿವೆ.

ಅಧ್ಯಕ್ಷರು: ಪ್ರಶ್ನೋತ್ತರ ಮುಕ್ತಾಯವಾಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು, 8ನೇ ಪಟ್ಟಿ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳು

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, 24ನೇ ಆಗಸ್ಟ 1995ರಂದು ಲಿಖಿತ ಮೂಲಕ ಉತ್ತರಿಸುವ 8ನೇ ಪಟ್ಟಿಯ 91ನೇ ಪ್ರಶ್ನೆಗಳ ಪೈಕಿ, 60 ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ದಾವಣಗೆರೆ ಸಾರಿಗೆ ವಿಭಾಗದಲ್ಲಿ ಬಸ್ಸುಗಳ ಕೊರತೆ.

892-ಶ್ರೀ ಹೆಚ್. ಶಿವಪ್ಪ (ಹರಿಹರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದಾವಣಗೆರೆ ಸಾರಿಗೆ ವಿಭಾಗದಲ್ಲಿ ಬಸ್ಸುಗಳ ಕೊರತೆ ಇರುವುದರಿಂದ ಹರಿಹರ ತಾಲ್ಲೂಕು ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲು ತುಂಬಾ ತೊಂದರೆ ಆಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಪ್ರದೇಶದಲ್ಲಿ ಕೂಡಲೇ ಹೆಚ್ಚಿನ ಬಸ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳುವರೆ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು):

ಅ) ಪ್ರಸ್ತುತ ದಾವಣಗೆರೆ ವಿಭಾಗದಲ್ಲಿ ವಾಹನಗಳ ಕೊರತೆ ಕಂಡುಬರುವುದಿಲ್ಲ, ಸಂಸ್ಥೆಯ ವತಿಯಿಂದ ಕಲ್ಪಿಸಲಾಗಿರುವ ಬಸ್ ಸೌಲಭ್ಯವು ಹರಿಹರ ತಾಲ್ಲೂಕಿನಲ್ಲಿಸ ಒತ್ತಡಕ್ಕನುಗುಣವಾಗಿರುತ್ತವೆ.